		Hole, Yadur village, Hosanagar Taluk, Shimoga District.	3
8	Nandi Basaveshwara Power Generation Company	Bhadra RBC MHS Across Ahadra Right Bank Canal, Yadehalli village, Bhadravati Taluk, Shimoga District.	0.18
		Total	**30.99**

1139 ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರ ಆಶ್ರಯ ಮನೆಗಳಿಗೆ ಮತ್ತು ಗ್ರಾಮೀಣ ಆಶ್ರಯ ಮನೆಗಳಲ್ಲಿರುವ ನಿಯಮಾವಳಿಗಳೇನು; ಈ ವ್ಯತ್ಯಾಸಕ್ಕೆ ಕಾರಣಗಳೇನು;

ಆ) ಪಟ್ಟಣಗಳ ಆಶ್ರಯ ಮನೆಗಳಿಗೆ ಯೂನಿಟ್ ದರವನ್ನು ಹೆಚ್ಚಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ; ಇಲ್ಲವಾದಲ್ಲಿ, ಈ ಹೊತ್ತಿನ ದುಬಾರಿ ಬೆಲೆಗಳಲ್ಲಿ ರೂ.25 ಸಾವಿರದಲ್ಲಿ ಯಾವ ರೀತಿ ಮನೆಗಳನ್ನು ನಿರ್ಮಿಸಿಕೊಡಲಾಗುವುದು;

ಇ) ಬಹುತೇಕ ಪಟ್ಟಣ ಪ್ರದೇಶದಲ್ಲಿ ಸೈಟ್‌ಗಳ ಕೊರತೆ ದೊಡ್ಡ ಪ್ರಮಾಣದಲ್ಲಿ ಇರುವುದು ಇದಕ್ಕಾಗಿ ಜಮೀನು ಖರೀದಿಸಲು ಅವಕಾಶ ಮಾಡಲಾಗುವುದೇ; ಹಾಗಿದ್ದಲ್ಲಿ, ಪ್ರತಿ ಎಕರೆಗೆ ನಿಗದಿ ಮಾಡಿದ ಬೆಲೆ ಎಷ್ಟು;

ಈ) ರಬಕವಿ ಬನಹಟ್ಟಿ, ತೇರದಾಳ ಮತ್ತು ಮಹಾಲಿಂಗಪೂರ, ನಗರಗಳಲ್ಲಿ ಆಶ್ರಯ ಮನೆಗಳಿಗಾಗಿ ಬೇಡಿಕೆ ಬಂದ ಅರ್ಜಿಗಳ ಸಂಖ್ಯೆ ಎಷ್ಟು; ಅರ್ಜಿದಾರರಿಗೆ ಎಂದು ಆಶ್ರಯ ಮನೆಗಳನ್ನು ಒದಗಿಸಲಾಗುವುದು?

ಶ್ರೀ ವಿ.ಸೋಮಣ್ಣ (ವಸತಿ ಮತ್ತು ಮುಜರಾಯಿ ಸಚಿವರು) :

ಅ) ನಗರ ಆಶ್ರಯ ಮನೆಗಳಿಗೆ ಮತ್ತು ಗ್ರಾಮೀಣ ಆಶ್ರಯ ಮನೆಗಳಲ್ಲಿರುವ ನಿಯಮಾವಳಿಗಳು ಈ ಕೆಳಗಿನಂತಿವೆ.

ನಗರ ಆಶ್ರಯ	ಗ್ರಾಮೀಣ ಆಶ್ರಯ
• ನಗರದಲ್ಲಿ ನೀಡಲಾಗುತ್ತಿರುವ ಮನೆಗಳನ್ನು ನಗರ ಸ್ಥಳೀಯ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. • ನಗರ ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಯ್ಕೆಯನ್ನು ಆಶ್ರಯ ಸಮಿತಿಯು ಮಾಡುತ್ತಿದೆ. • ಪ್ರಸ್ತುತ ನಗರ ಆಶ್ರಯ ಯೋಜನೆಯಡಿಯಲ್ಲಿ ನೀಡಲಾಗುವ ಘಟಕ ವೆಚ್ಚವು ರೂ. 25,000/– ಗಳಾಗಿದ್ದು, ಇದನ್ನು ಸಾಲದ ರೂಪದಲ್ಲಿ ನೀಡಲಾಗುತ್ತಿದೆ.	• ಗ್ರಾಮೀಣ ಆಶ್ರಯ ಯೋಜನೆಯನ್ನು ಗ್ರಾಮ ಪಂಚಾಯಿತಿ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. • ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ಗ್ರಾಮ ಪಂಚಾಯಿತಿಯು ಗ್ರಾಮ ಸಭೆಯ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡುತ್ತಿದೆ. • ಗ್ರಾಮೀಣ ಆಶ್ರಯದಲ್ಲಿ ಪ್ರಸ್ತುತ ನೀಡಲಾಗುತ್ತಿರುವ ಘಟಕದ ವೆಚ್ಚ ರೂ. 40,000/– ಗಳಾಗಿದ್ದು ಪ.ಜಾತಿ. ಪ.ಪಂ ಫಲಾನುಭವಿಗಳಿಗೆ ಸಂಪೂರ್ಣ ಸಹಾಯಧನವಾಗಿದ್ದು, ಇತರೆ ಫಲಾನುಭವಿಗಳಿಗೆ ರೂ.20,000/– ಸಾಲ ಮತ್ತು ರೂ. 20,000/– ಸಹಾಯಧನವಾಗಿರುತ್ತದೆ.

ಆ) ಇದೆ.

ಇ) ನಗರ ಪ್ರದೇಶದಲ್ಲಿ ನಿವೇಶನರಹಿತ ಫಲಾನುಭವಿಗಳಿಗೆ ನಿವೇಶನಗಳನ್ನು ಹಂಚಲು ಸರ್ಕಾರಿ ಭೂಮಿ ಬೇಡಿಕೆಯಷ್ಟು ಲಭ್ಯವಿಲ್ಲದಿರುವ ಕಾರಣ ಖಾಸಗಿ ಜಮೀನು ಖರೀದಿಸಲು ಅವಕಾಶ ಮಾಡಲಾಗಿದೆ.

ಖಾಸಗಿ ಜಮೀನುಗಳನ್ನು ಖರೀದಿಸಲು ವಸತಿ ಇಲಾಖೆ ಪತ್ರ ಸಂಖ್ಯೆ ವಇ 57/ಹೆಚ್.ಎಎಸ್/2007, ದಿನಾಂಕ: 04-08-2007ರಲ್ಲಿ ಇದ್ದಂತೆ ಮಾರ್ಗಸೂಚಿ ಬೆಲೆಯ ಎರಡರಷ್ಟು ಬೆಲೆಗೆ ಜಮೀನು ಖರೀದಿಸಲು ಅವಕಾಶ ಇರುತ್ತದೆ.

ಒಂದು ವೇಳೆ ಈ ಬೆಲೆಗೂ ಜಮೀನುಗಳು ದೊರಕದೇ ಇದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿ ಸರ್ಕಾರದ ಅನುಮೋದನೆ ಪಡೆದು ಖರೀದಿಸಲು ಕೂಡ ಅವಕಾಶ ಕಲ್ಪಿಸಲಾಗಿದೆ.

ಈ) ಆದರೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮವು ಸ್ಥಳೀಯ ಸಂಸ್ಥೆಗಳ ಮೂಲಕ ನಿವೇಶನರಹಿತರು ಮತ್ತು ವಸತಿರಹಿತರ ಸಮೀಕ್ಷೆ ನಡೆಸಲಾಗಿದ್ದು ಈ ಸಮೀಕ್ಷೆಯ ಪ್ರಕಾರ ರಬಕವಿ ಬನಹಟ್ಟಿ, ತೇರದಾಳ ಮತ್ತು ಮಹಾಲಿಂಗಪೂರದಲ್ಲಿ ಕಂಡು ಬಂದಿರುವ ನಿವೇಶನ ರಹಿತರು ಮತ್ತು ವಸತಿ ರಹಿತರ ವಿವರವನ್ನು ಈ ಕೆಳಗಿನಂತೆ ನೀಡಲಾಗಿದೆ.

ಸ್ಥಳೀಯ ಸಂಸ್ಥೆಗಳು	ನಿವೇಶನ ರಹಿತರು	ವಸತಿ ರಹಿತರು
ರಬಕವಿ ಬನಹಟ್ಟಿ	250	944
ತೇರದಾಳ	113	33
ಮಹಾಲಿಂಗಪೂರ	735	1144
ಒಟ್ಟು	**1098**	**2121**

ನಗರ ಆಶ್ರಯ ಯೋಜನೆಯಡಿ ಘಟಕ ವೆಚ್ಚವನ್ನು ಹೆಚ್ಚಿಸಿ ಮನೆಗಳ ನಿರ್ಮಾಣ ಕೈಗೊಂಡು ಆಶ್ರಯ ಮನೆಗಳನ್ನು ಒದಗಿಸಲಾಗುವುದು.

988 ಶ್ರೀ ವೀರಭದ್ರಪ್ಪ ಹಾಲಹರವಿ (ಹುಬ್ಬಳ್ಳಿ-ಧಾರವಾಡ ಪೂರ್ವ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದ ಮ್ಯಾದಾರ ಬೀದಿಯಲ್ಲಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯು ಇಕ್ಕಟ್ಟಿನಿಂದ ಕೂಡಿದ್ದು, ಸದರಿ ಕಛೇರಿಯನ್ನು ಬೇರೆ ಕಟ್ಟಡಕ್ಕೆ ಸ್ಥಳಾಂತರಿಸುವ ವಿಚಾರ ಸರ್ಕಾರದ ಮುಂದಿದೆಯೇ;

ಆ) ಇದ್ದಲ್ಲಿ, ಯಾವ ಕಟ್ಟಡಕ್ಕೆ ಸ್ಥಳಾಂತರ ಗೊಳಿಸಲಾಗುವುದು;